# ಫ್ಯಾಷನ್‌ನಲ್ಲೂ ಕನ್ನಡ ಕನ್ನಡ!

**ವರ್ಣ ಸಂಯೋಜನೆಗೂ ಫ್ಯಾಷನ್‌ಗೂ ಬಿಡಿಸಲಾರದ ಬಾಂಧವ್ಯ. ಇದೀಗ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕೆಂಪು–ಹಳದಿ ಬಣ್ಣಗಳ ಸಂಯೋಜನೆ, ಉಡುಪಿನ ನೆಪದಲ್ಲಿ ಟ್ರೆಂಡ್ ಆಗುತ್ತಿದೆ.**



■ **ಯು. ಅನಂತ್**

ರಾಷ್ಟ್ರೀಯ ಹಬ್ಬ, ನಾಡಹಬ್ಬಗಳಿಗೂ ಫ್ಯಾಷನ್‌ಗೂ ಇರುವ ನಂಟು ಅನನ್ಯ. ಈ ಮಾತಿಗೆ ಪುಷ್ಟಿ ನೀಡುವಂತೆ, ಗಾಂಧಿ ಜಯಂತಿಗೆ ಖಾದಿ ಉಡುಗೆ ಫ್ಯಾಷನ್ ಬೆಸೆದುಕೊಂಡರೆ ಕನ್ನಡ ರಾಜ್ಯೋತ್ಸವಕ್ಕೆ ಹಳದಿ–ಕೆಂಪು ಬಣ್ಣದ ಉಡುಪುಗಳು ಕನ್ನಡ ಕಂಪನ್ನು ಬಿಂಬಿಸಲು ಹೊರಟಿವೆ. ಕನ್ನಡ ಹಬ್ಬದ ನವೆಂಬರ್ ಮಾಸ ಪೂರ್ತಿ ಈ ಎರಡು ಬಣ್ಣಗಳದ್ದೇ ಕಲರವ!

ರಾಜ್ಯೋತ್ಸವ ಆಚರಣೆ ಎಂದರೆ ಅದು ಕನ್ನಡ ನುಡಿತೇರು ಎಳೆಯುವ ಸಮಯ. ಕನ್ನಡ ಗೀತೆ ಹಾಡುವ, ನೃತ್ಯ ನಮನ ಸಲ್ಲಿಸುವ ಸಂದರ್ಭ. ಈ ಸಂಭ್ರಮಕ್ಕೆ ಫ್ಯಾಷನ್ ಲೋಕ ಕೂಡ ಸಾಥಿ ನೀಡುತ್ತಿದೆ. ಇತ್ತೀಚೆಗೆ ಕನ್ನಡ ಧ್ವಜದ ಬಣ್ಣವಾದ ಕೆಂಪು, ಹಳದಿ ಬಣ್ಣಗಳು ಕನ್ನಡ ಬಾವುಟಗಳಂತೆಯೇ ಬಣ್ಣದ ಉಡುಪುಗಳಲ್ಲಿ ಒಡಮೂಡುತ್ತಿವೆ.

ಕಣ್ಣು ಕೋರೈಸುವ ಕೆಂಪು ಹಳದಿ ಬಣ್ಣಗಳಿಂದ ಕೂಡಿದ ಸೀರೆ, ಹಾಫ್‌ಸಾರಿ, ಸಲ್ವಾರ್, ಫ್ರಾಕ್‌ಗಳು ತರಾವರಿ ವಿನ್ಯಾಸದಲ್ಲಿ ಮಿಂಚುತ್ತವೆ. ಈ ಎರಡೂ ಬಣ್ಣಗಳ ಕಾಂಬಿನೇಷನ್ ಆಕರ್ಷಕವಾಗಿದ್ದು, ಪಥಸಂಚಲನ, ನೃತ್ಯ ಮುಂತಾದ ಸಂದರ್ಭಗಳಲ್ಲಿ ಮಕ್ಕಳಿರಲಿ, ದೊಡ್ಡವರಿರಲಿ ಎಲ್ಲ ವಯೋಮಾನದವರಿಗೆ ತುಂಬ ಸೊಗಸಾಗಿ ಕಾಣುತ್ತದೆ. ಇದರ ಜೊತೆಗೆ ಈ ಬಣ್ಣಗಳ ಕಾಂಬಿನೇಷನ್‌ನ ಬಳೆಗಳು, ಬ್ಯಾಂಡ್, ಬಿಂದಿ, ಕಿವಿಯೋಲೆ ರಾಜ್ಯೋತ್ಸವ ಸಂಭ್ರಮವನ್ನು ಇಮ್ಮಡಿಸುತ್ತದೆ.

ನವೆಂಬರ್ ಮಾಸದಲ್ಲಿ 'ನುಡಿಹಬ್ಬ ಬಣ್ಣ'ದ ಉಡುಪನ್ನು ಧರಿಸಲು ಇಚ್ಛಿಸುವವರು ಈ ಎರಡೂ ಬಣ್ಣಗಳ ಉಡುಗೆ ಜೊತೆಗೆ ಆ್ಯಕ್ಸೆಸರೀಸ್

ಕನ್ನಡ ಸಂಭ್ರಮ